**ದಿನಾಂಕಃ 19/09/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು: 9 ನೇ ಪ್ರತಿವಾದಿ ಪರ ಶ್ರೀ. ಐ ಆರ್ ಎಸ್ ವಕೀಲರಿಂದಃ**

1. ನಾನು 8 ವರುಷಗಳಿಂದ ತರಕಾರಿ ವ್ಯಾಪಾರ ಮಾಡುತ್ತೇನೆ. ಈ ದಾವೆ ಹೂಡಿದ ನಂತರ ತರಕಾರಿ ವ್ಯಾಪಾರ ಮಾಡುತ್ತಿದ್ದೇನೆ. ದಾವ ಹೂಡುವ ಮುನ್ನ ಗೃಹಿಣಿಯಾಗಿದ್ದೆ. ನನ್ನ ಗಂಡ ತರಕಾರಿ ವ್ಯಾಪಾರ ಮಾಡುತ್ತಿದ್ದಾರೆ. ನನಗೆ ಪ್ರತಿವಾದಿಗಳು ಗೊತ್ತು. ಪ್ರತಿವಾದಿಗಳನ್ನು ಸೋಮಶೇಖರ್ ಎಂಬುವವರು ಪರಿಚಯ ಮಾಡಿಕೊಟ್ಟಿದ್ದರು. ಸೋಮಶೇಖರ್ ರವರು ದೊಡ್ಡ ಹೊನ್ನೂರು ಗ್ರಾಮಸ್ಥರು, ಅವರ ತಂದೆ ಹೆಸರು ಗೊತ್ತಿಲ್ಲ. ನಾನು ಹಣಕಾಸಿನ ವ್ಯವಹಾರ ಮಾಡುವುದಿಲ್ಲ. ನಾನೇ ಖುದ್ದಾಗಿ ಈ ದಾವೆಯ ಜಮೀನಿನ ವ್ಯವಹಾರ ಮಾಡಿರುತ್ತೇನೆ. ನಾನು ಯಾರ ಸಹಕಾರವನ್ನು ಪಡೆದಿಲ್ಲ. ಈ ಜಮೀನಿನ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿದ್ದೇನೆ. ಕರಾರು ಪತ್ರ ಮಾಡುವ ಮುನ್ನ ವಕೀಲರ ಸಲಹೆ ಪಡೆದಿಲ್ಲ. ಈ ದಾವಾ ಸ್ವತ್ತನ್ನು ಸೋಮಯ್ಯ ರವರು ಬೇರೆಯವರಿಗೆ ಬೋಗ್ಯ ಮಾಡಿದ್ದರು, ಬೋಗ್ಯ ಮಾಡಿಸಿಕೊಂಡವರ ಹೆಸರು ಗೊತ್ತಿಲ್ಲ. ಎಷ್ಟು ಹಣಕ್ಕೆ ಎಷ್ಟು ವರುಷಕ್ಕೆ ಬೋಗ್ಯ ಮಾಡಿದ್ದರು ಎಂದು ಗೊತ್ತಿಲ್ಲ. ಬೋಗ್ಯದ ಹಣ ಮರು ಪಾವತಿಸಿದ ಬಗ್ಗೆ ದಾಖಲಾತಿ ಹಾಜರುಪಡಿಸಿಲ್ಲ.

2. ದಾವಾ ಸ್ವತ್ತು ಹಾರನಹಳ್ಳಿ ಹೋಬಳಿ ದೊಡ್ಡ ಹೊನ್ನೂರು ಗ್ರಾಮಕ್ಕೆ ಸೇರಿದ್ದು. ದಾವಾ ಸ್ವತ್ತಿನ ಸ. ನಂ.16/2 ಅದರ ವಿಸ್ತೀರ್ಣ ಒಟ್ಟು 2 ಎಕರೆ 7 ಗುಂಟೆ ಇದೆ. ಸ.ನಂ. 16 ರಲ್ಲಿ ಒಟ್ಟು ಎಷ್ಟು ಎಕರೆ ಇದೆ ಎಂದು ಗೊತ್ತಿಲ್ಲ. ಕರಾರು ಪತ್ರ ಬರೆಸಿಕೊಳ್ಳುವ ಮುನ್ನ ಸರ್ವೆ ಮಾಡಿಸಿದ್ದೆವು. ಅದರ ತಾರೀಖು, ತಿಂಗಳು, ಇಸವಿ ಗೊತ್ತಿಲ್ಲ. ಅದರ ಸ್ಕೆಚ್ ಹಾಜರುಪಡಿಸಿದ್ದೇವೆ. 1 ರಿಂದ 6 ನೇ ಪ್ರತಿವಾದಿಗಳ ಮನೆ ದೊಡ್ಡ ಹೊನ್ನೂರಿನಲ್ಲಿದೆ. ನಾನು ಮತ್ತು ನನ್ನ ಗಂಡ ಸೋಮಯ್ಯ ರವರ ಮನೆಗೆ ಹೋಗಿದ್ದೆವು. ಅದೇ ದಿನ ಮಾತುಕತೆ ಆಗಿತ್ತು. ಅದೇ ದಿನ ಎಲ್ಲಾ ದಾಖಲಾತಿಗಳನ್ನು ನೋಡಿದೆವು. ಜಮೀನನ್ನು ತೋರಿಸಿದ್ದರು. ಜಮೀನಿನ ಚಕ್ಕುಬಂದಿ ಪೂಃ ಕೆಂಗಮ್ಮ ರವರ ಜಮೀನು, ಪಶ್ಚಿಮ ಮತ್ತು

ಉತ್ತರಕ್ಕೆ ರಸ್ತೆ, ದಃ ಚಂದ್ರೇಗೌಡರ ಜಮೀನು ಮತ್ತು ಇತರೇ. ನನಗೆ ಎಂ ಎಂ ಸುರೇಶ ಬಿನ್ ಅಣ್ಣಯ್ಯನಾಯಕ ಗೊತ್ತು. ಅವರು ಮಾತುಕತೆಗೆ ಬಂದಿರಲಿಲ್ಲ. ಮಂಜುನಾಥ ರವರು ನನಗೆ ಪರಿಚಯ ಇಲ್ಲ. ಎಂ ಎಂ ಸುರೇಶ ರವರು ಪರಿಚಯ ಇಲ್ಲ.

3. ಮಾತುಕತೆ ದಿನ ಟೋಕನ್ ಅಡ್ವಾನ್ಸ್ ಮುಂಗಡವಾಗಿ ಎಷ್ಟು ಹಣ ನೀಡಿದ್ದೆವು ಎಂದು ನೆನಪಿಲ್ಲ. ಆದರೆ ಸಾಕಷ್ಟು ನೀಡಿದ್ದೆವು. ಮುಂಗಡವಾಗಿ ರೂ. 3,25,000/- ನೀಡಿದ್ದೆವು. ಮಾತುಕತೆ ಆದ 4-5 ದಿನಗಳ ನಂತರ ಸದರಿ ಮುಂಗಡ ಹಣ ನೀಡಿದ್ದೆವು.

4. ಸೋಮಯ್ಯ ರವರ ಮಗಳು ವಸಂತರವರ ಮದುವೆಗೆ ಹೋಗಿರಲಿಲ್ಲ. ವಸಂತರವರ ಮದುವೆಗೆಂದು ಸದರಿ ಹಣವನ್ನು ಪಡೆದಿದ್ದರು, ಆದರೆ ಅವರ ಮದುವೆ ಯಾವಾಗ ಆಯಿತು ಎಂದು ಗೊತ್ತಿಲ್ಲ. ಶ್ರೀನಿವಾಸ ರವರ ಬೋಗ್ಯದ ಹಣವನ್ನು ತಿರುವಳಿ ಎಂದು ನಿಪಿ-1 ರಲ್ಲಿ ಬರೆದಿರುವಂತೆ ನನಗೆ ಗೊತ್ತಿದೆ. ಬೋಗ್ಯದ ಬಿಡುಗಡೆ ಬೇರೆ ದಿನ ಮಾಡಿದರು. ಶ್ರೀನಿವಾಸ ರವರಿಗೆ ಹಣವನ್ನು ನೀಡಿಲ್ಲ. ಸೋಮಯ್ಯ ರವರು ಶ್ರೀನಿವಾಸ ರವರಿಗೆ ಹಣ ನೀಡಿದ ಬಗ್ಗೆ ನಾನು ನೋಡಿಲ್ಲ. ಕರಾರು ಪತ್ರದ ದಿನವೇ ಬೋಗ್ಯ ಬಿಡುಗಡೆ ಆಯಿತೋ ಇಲ್ಲವೋ ನನಗೆ ಗೊತ್ತಿಲ್ಲ.

5. ಮಂಗಳೂರು ಕೊಂಚಡಿ ಶಾಖೆ ಕಾರ್ಪೋರೇಷನ್ ಬ್ಯಾಂಕ್ ನ ಖಾತೆ ನನ್ನ ಹೆಸರಿನಲ್ಲಿದೆ. 17-18 ವರುಷಗಳ ಹಿಂದೆ ಸದರಿ ಬ್ಯಾಂಕ್ ನಲ್ಲಿ ಖಾತೆ ತೆರೆದಿದ್ದೆ. ನಿಪಿ-1 ರಲ್ಲಿರುವ ಚೆಕ್ ಸಂಖ್ಯೆ000622 ನನ್ನ ಹೆಸರಿನಲ್ಲಿ ತೆಗೆದುಕೊಂಡಿದ್ದೆ.

(ಮುಂದುವರೆದ ಪಾಟೀಸವಾಲನ್ನು ಪ್ರತಿವಾದಿಯ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು)

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**I ಹಿಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**